Reg. No. 

# BSCKAL 103/FNDKAL 103/HRDKAL 103

ಗುಣಾಂಕ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಎಸ್.ಸಿ./ಬಿ. ಎಸ್.ಸಿ (ಎಫ್.ಎನ್.ಡಿ.)/ಬಿ.ಎ.
(ಎಚ್.ಆರ್.ಡಿ.) ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ 2013
(ಗುಣಾಂಕ ಆಧಾರಿತ ಸೆಮಿಸ್ಟರ್ ಪದ್ಧತಿ)
(2013-2014 Batch and Onwards)

ಕನ್ನಡ ಭಾಷಾ ಪತ್ರಿಕೆ – I

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 80

## ಭಾಗ-1 : ಕಾವ್ಯ

I. ಅ) ಒಂದಕ್ಕೆ ಉತ್ತರಿಸಿರಿ : (1×8=8)

1) ಬಸವಣ್ಣನವರ ವಚನಗಳಲ್ಲಿ ವ್ಯಕ್ತವಾಗಿರುವ ಸ್ವವಿಮರ್ಶೆ ಹಾಗೂ ಸಮಾಜ ವಿಮರ್ಶೆಯ ವಿಚಾರಗಳನ್ನು ವಿವರಿಸಿರಿ.

2) ಹರಿಶ್ಚಂದ್ರನ ಪತ್ನಿಪುತ್ರ ವಿಕ್ರಯದ ಸನ್ನಿವೇಶವನ್ನು ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ : (1×5=5)

1) 'ಶ್ರೀ ರಾಮನವಮಿಯ ದಿವಸ' ಕವಿತೆಯ ಆಶಯವನ್ನು ವಿವರಿಸಿರಿ.

2) ಸಮೃದ್ಧ ವಿವೇಕಕ್ಕೆ ಕಿವಿ ತೆರೆಯಬೇಕೆಂಬ ಕವಿಯ ಆಶಯವನ್ನು 'ಇಗೋ ಬಂದೆ' ಕವಿತೆಯ ಹಿನ್ನೆಲೆಯಲ್ಲಿ ವಿವರಿಸಿರಿ.

ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ : (2×3=6)

1) ಚಂದ್ರಶೇಖರ ಕಂಬಾರ

2) 'ಮುಟ್ಟಾಟ' ಕವಿತೆಯ ಆಶಯ

3) ಯೋಧ ಮತ್ತು ಹೆಂಗಸು ಕವಿತೆಯಲ್ಲಿ ಚಿತ್ರಿತವಾಗಿರುವ ಪಂಪ ಕವಿ

II. ಅ) ಒಂದು ಪದ್ಯಭಾಗದ ಸಂದರ್ಭ ಸೂಚಿಸಿ ಮಹತ್ವವನ್ನು ವಿವೇಚಿಸಿರಿ : (1×5=5)

1) ಹೋಹೆನೇ ತಂದೆ ಬೊಪ್ಪಯ್ಯ ಎಂದೆಂದು ಕಡು
ನೇಹದಿಂದಪ್ಪಿ ಕರುಣಂದೋಱಿ ಕಂಬನಿಯ
ಕಾಹೊನಲೊಳದ್ದುವ ಕುಮಾರನಂ ಕಾಲ್ಗೆಱಗಿ
ತಲೆವಾಗಿ ನಿಂದ ಸತಿಯ ।
ಬೇಹೊಡೆಯ ನಾನಿರಲು ಮಾಱಿದವನಂ ಕೇಳ್ವ
ಸಾಹಸವ ನೋಡೆಂದು ಕೆಡೆಹೊಯ್ದು ನೂಕಿ ನಿಜ
ಗೇಹಕ್ಕೆ ಜಱಿಯುತ್ತ ಕೊಂಡೊಯ್ದನವನಿಪನ
ಮನ ಮಱುಗಬೇಹುದೆಂದು ।

P.T.O.

2) ವಿಜೃಂಭಿಸಿತು ರಾಮಬಾಣ, ನಿಜ, ಕತ್ತಲಿಗೆ
ಹತ್ತೆ ತಲೆ? ನೂರೆಕೆ? ಅದು ಅಸಂಖ್ಯಃ
ಕತ್ತರಿಸಿದರೆ ಬೆಳೆವ, ಬೆಳೆದು ಕತ್ತಿಗೆ ಬರುವ
ಅನಾದಿ ಕೋದಂಡ ದಂಡವೂ ಹೀಗೆ ದಂಡ;

ಆ) **ಎರಡು** ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿಶದಪಡಿಸಿರಿ: **(2×3=6)**

1) ಯೋಧ ನಡೆಯುವ ದಾರಿ ಕವಿಯ ದಾರಿಯು ಕೂಡ.
2) ಹೊಸ ವಿಶ್ವ ನವ್ಯ ಬ್ರಹ್ಮರು ನಾವು ತೂಗಬೇಕು.
3) ಕಾಯುತ್ತಿದ್ದಳು ಶಕುಂತಲೆ ದುಷ್ಯಂತನಿಗಾಗಿ ಹೀಗೇನೆ.

III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ: **(5×1=5)**

1) ಹರಿಶ್ಚಂದ್ರನ ಮಂತ್ರಿ ಯಾರು?
2) ಮಂದರ ಪರ್ವತವನ್ನು ವಿಷ್ಣು ಯಾವ ಅವತಾರದಲ್ಲಿ ಮೇಲೆತ್ತಿದನು?
3) ಸು. ರಂ. ಎಕ್ಕುಂಡಿಯವರ ಪೂರ್ಣ ಹೆಸರೇನು?
4) 'ಹೇಳತೇನ ಕೇಳ' ಯಾರ ಕವನ ಸಂಕಲನ?
5) 'ಮುಟ್ಟಾಟ'– ಯಾರು ಬರೆದ ಕವಿತೆಯಾಗಿದೆ?

## ಭಾಗ – 2 : ಗದ್ಯ

IV. ಅ) **ಒಂದು** ಪ್ರಶ್ನೆಗೆ ಉತ್ತರಿಸಿರಿ: **(1×8=8)**

1) 'ಒಂಟಿ ಬ್ಯಾರಿಯೂ ಅವಭೃತ ಉತ್ಸವವೂ' ಕತೆಯಲ್ಲಿ ನಿರೂಪಿತವಾಗಿರುವ ಸಾಮಾಜಿಕ ಸಾಮರಸ್ಯವನ್ನು ವಿವರಿಸಿರಿ.
2) ಸಾಮಾಜಿಕ ವ್ಯವಸ್ಥೆಯ ಶೋಷಣೆಯ ಬದುಕನ್ನು 'ಬಂಧಮುಕ್ತಿ' ಕತೆಯು ಹೇಗೆ ಚಿತ್ರಿಸಿದೆ? ವಿವರಿಸಿರಿ.

ಆ) **ಒಂದು** ಪ್ರಶ್ನೆಗೆ ಉತ್ತರಿಸಿರಿ: **(1×8=8)**

1) ರಂಗಯ್ಯನು ಹುಲಿಬೇಟೆಯ ಆಡಿದ ಸಂದರ್ಭವನ್ನು ವಿವರಿಸಿರಿ.
2) ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳ ಸಂಬಂಧದ ಹೊಸ ನೆಲೆಗಳನ್ನು ಚರ್ಚಿಸಿರಿ.

ಇ) **ಒಂದು** ಪ್ರಶ್ನೆಗೆ ಉತ್ತರಿಸಿರಿ: **(1×5=5)**

1) ಒಗ್ಗರಣೆ ಶೀನಪ್ಪ ಜಮೀನುದಾರನಾಗಿ ಮಾರ್ಪಾಡುಗೊಂಡ ಸನ್ನಿವೇಶವನ್ನು ವಿವರಿಸಿರಿ.
2) ರಾಷ್ಟ್ರೀಯತೆಯ ಕುರಿತಂತೆ ಲೇಖಕರ ನಿಲುವುಗಳನ್ನು ವಿವರಿಸಿರಿ.

V. ಒಂದಕ್ಕೆ ಟಿಪ್ಪಣಿ ಬರೆಯಿರಿ : (1×5=5)

1) ಮಾನವ ಹಾಗೂ ಪ್ರಾಣಿ ಜೀವನದ ಸಂಬಂಧಗಳ ಕುರಿತು ಚರ್ಚಿಸಿರಿ.

2) ಮಾತೃಭಾಷಾ ಶಿಕ್ಷಣದ ಕುರಿತಂತೆ ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

3) ಶೋಷಣಾ ಮುಕ್ತ ಸಮಾಜ ವ್ಯವಸ್ಥೆ ರೂಪುಗೊಳ್ಳಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಬರೆಯಿರಿ.

VI. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : (4×1=4)

1) ವ್ಯಾಸರಾಯ ಬಲ್ಲಾಳರು ಉದ್ಯೋಗ ನಿಮಿತ್ತ ಯಾವ ನಗರದಲ್ಲಿ ನೆಲೆಸಿದ್ದರು ?

2) 'ದೇಶ ಯಾವುದಾದರೇನು' – ಯಾರ ಪ್ರವಾಸ ಕಥನವಾಗಿದೆ ?

3) 'ಮಲೆನಾಡಿನ ಚಿತ್ರಗಳು' – ಕೃತಿಯನ್ನು ಬರೆದ ಲೇಖಕ ಯಾರು ?

4) ನಮ್ಮ ಸಾಂಸ್ಕಾರಿಕ ಬದುಕಿನ ಬೆಳವಣಿಗೆಗೆ ಜೈವಿಕ ವೈವಿಧ್ಯತೆ ಅಗತ್ಯ ಎಂದು ಪ್ರತಿಪಾದಿಸಿದ ವಿಜ್ಞಾನಿ ಯಾರು ?

## ಭಾಗ – 3 : ಕ್ರಿಯಾತ್ಮಕ ಕನ್ನಡ

VII. **ಒಂದು** ಪ್ರಶ್ನೆಗೆ ಉತ್ತರಿಸಿರಿ : (1×8=8)

1) ಪ್ರಬಂಧದ ಸಾಮಾನ್ಯ ಸ್ವರೂಪವನ್ನು ವಿವರಿಸಿರಿ.

2) ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ಬರವಣಿಗೆ ಬೆಳೆದು ಬಂದ ಕ್ರಮವನ್ನು ವಿವರಿಸಿರಿ.

VIII. **ಒಂದು** ಪ್ರಶ್ನೆಗೆ ಉತ್ತರಿಸಿರಿ : (1×5=5)

1) ಆಧುನಿಕ ವಿಜ್ಞಾನವನ್ನೂ ಮಾನವಪರಗೊಳಿಸುವ ಬಗ್ಗೆ ನಿಮ್ಮ ಚಿಂತನೆಗಳನ್ನು ಬರೆಯಿರಿ.

2) ಪರಿಸರ ವಿರೋಧಿ ಯೋಜನೆಗಳ ಕುರಿತು ಪ್ರಬಂಧವನ್ನು ಬರೆಯಿರಿ.

IX. ಪ್ರತಿಯೊಂದಕ್ಕೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : (2×1=2)

1) ವೈದ್ಯವಿಜ್ಞಾನ ವಿಶ್ವಕೋಶವನ್ನು ಯಾವ ವಿಶ್ವವಿದ್ಯಾಲಯವು ಪ್ರಕಟಿಸಿದೆ ?

2) ಪ್ರಬಂಧವನ್ನು 'ಎಸ್ಸೆಯ್' ಎಂದು ಹೆಸರಿಸಿದ ಫ್ರೆಂಚ್ ಬರಹಗಾರ ಯಾರು ?

---